ಅಭಿವೃದ್ಧಿ ಯೋಜನೆಯನ್ವಯ ಹಸಿರು ಪಟ್ಟಿಯಲ್ಲಿ ವ್ಯವಸಾಯದ ಜಮೀನುಗಳನ್ನು ವ್ಯವಸಾಯೇತರ ಉಪಯೋಗಕ್ಕೆ ಭೂ ಪರಿವರ್ತನೆ ಮಾಡುವ ಬಗ್ಗೆ

೯(೧೬೯) ಶ್ರೀ ಮೊಹಮ್ಮದ್ ಮೊಯಿನುದ್ದೀನ್ (ಚಾಮರಾಜಪೇಟೆ).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯೆಯಿಟ್ಟು ಉತ್ತರಿಸುವರೇ :—

ಬೆಂಗಳೂರು ವ್ಯಾಪಕ ಅಭಿವೃದ್ಧಿ ಯೋಜನೆಯನ್ವಯ ಹಸಿರು ಪಟ್ಟಿಯಲ್ಲಿ ವ್ಯವಸಾಯದ ಜಮೀನುಗಳನ್ನು ವ್ಯವಸಾಯೇತರ ಉಪಯೋಗಕ್ಕೆ ಭೂ ಪರಿವರ್ತನೆಯನ್ನು ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ ೪೬೪ ಎಲ್‌ಜಿಪಿ ೬೪ ದಿನಾಂಕ ೨೯ನೇ ಜುಲೈ ೧೯೬೬ ನ್ನು ೨೯ನೇ ಆಕ್ಟೋಬರ್ ೧೯೬೬ ರಲ್ಲಿ ಹಿಂದಕ್ಕೆ ಪಡೆಯುವ (ತಡೆ ಹಿಡಿಯುವ) ತನಕ ಭೂ ಪರಿವರ್ತನೆ ಮಂಜೂರಾತಿ ಬಗ್ಗೆ ?

ಆರ್ಜಿದಾರರ ಹೆಸರು	ಸರ್ವೆ ನಂ.	ಗ್ರಾಮ ಸ್ಥಳ	ಹೋಬಳಿ	ಭೂ ಪರಿವರ್ತನೆ ಮಂಜೂರಾತಿ ನೀಡಿದ ವಿಸ್ತೀರ್ಣ ಎಕರೆ–ಗುಂಟೆ	ಬೆಂಗಳೂರು ಸಿಟಿಯಿಂದ ಇರುವ ದೂರ	ಯಾವ ಉದ್ದೇಶಕ್ಕೆ ಭೂ ಪರಿವರ್ತನೆ ನೀಡಿದೆ
1	2	3	4	5	6	7

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಸಚಿವರು).—ಯಾವ ಪ್ರಕರಣಗಳೂ ಇಲ್ಲ.

೯(೧೬೯) ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು.—ನಿಮ್ಮ ಪ್ರಶ್ನೆ ಬಂದಿಲ್ಲ. ನಡುವೆ ಎದ್ದು ಮಾತನಾಡುವುದು ಸರಿಯಲ್ಲ. ಕೂಡ್ರಿ.

ಶ್ರೀ ಬಿ. ಸ್ವಾಮಿರಾವ್.—ಪದೇ ಪದೇ ಹೀಗಾಗುತ್ತಿದ್ದರೆ.....

ಅಧ್ಯಕ್ಷರು.—ನಾನು ರೆಕಾರ್ಡ್ ಮಾಡಬೇಡ ಎಂದು ಹೇಳಬೇಕಾಗುತ್ತೆದೆ. ನೀವು ಮಾಡುವುದು ಸರಿಯಲ್ಲ. ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ. ನಡುವೆ ನಿಮ್ಮ ಇಂಟರ್‌ಫಿಯರೆನ್ಸ್ ಏನು?

ಶ್ರೀ ಮಹಮದ್ ಮೊಯಿನುದ್ದೀನ್.—೧೯೬೪ರಲ್ಲಿ ಹೌಸಿಂಗ್ ಮತ್ತು ಅರ್ಬನ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟಿನವರು ಗ್ರೀನ್ ಬೆಲ್ಟ್ ಏರಿಯಾದ ಬಗ್ಗೆ ನೋಟಿಫೈನ್ ಮಾಡಿದ್ದಾರೆ. ಆದರೆ ಆಕ್ಟೋಬರ್ ೧೯೬೬ರಲ್ಲಿ ರೆವಿನ್ಯೂ ಡಿಪಾರ್ಟ್‌ಮೆಂಟಿನವರು ಯಾವುದೂ ಗ್ರೀನ್ ಬೆಲ್ಟ್ ಇಲ್ಲ ಎಂಬ ಬಗ್ಗೆ ಸರ್ಕ್ಯುಲರ್ ಹೊರಡಿಸಿದ್ದಾರೆ. ಇಂಥ ಸರ್ಕ್ಯುಲರ್ ಹೊರಡಿಸುವುದಕ್ಕೆ ಕಾರಣ ಏನು? ಇಂಥ ಮಿಸ್‌ಚಿವಸ್ ಸರ್ಕ್ಯುಲರ್ ಸರ್ಕಾರದವರು ಏತಕ್ಕೆ ಇಷ್ಯೂ ಮಾಡಿದರು? ಮಾನ್ಯ ಮಂತ್ರಿಗಳು ಇದಕ್ಕೆ ಉತ್ತರ ಕೊಡಬೇಕು. ಇಂಥ ಸರ್ಕ್ಯುಲರ್ ಇಷ್ಯೂ ಮಾಡಿದರೆ ಎಷ್ಟು ಹಾನಿ ಯಾಗುತ್ತದೆ? ಗ್ರೀನ್‌ಬೆಲ್ಟ್ ಜಮೀನುಗಳು ನಾನ್–ಅಗ್ರಿಕಲ್ಚರ್ ಆಗಿ ಪರಿವರ್ತನೆ ಯಾಗುತ್ತದೆ ಎಂಬುದು ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರಿಗೆ ಅರ್ಥವಾಗಲಿಲ್ಲವೆ? ಈ ಸರ್ಕ್ಯುಲರ್ ಇಷ್ಯೂ ಮಾಡುವಾಗ ಎಚ್. ಯು. ಡಿ. ಡಿಪಾರ್ಟ್‌ಮೆಂಟ್‌ನ ಅಭಿಪ್ರಾಯ ತೆಗೆದುಕೊಂಡಿದ್ದಾರಾ ಎಂಬುದನ್ನೂ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಆದರಿಂದ ತೊಂದರೆಯಾಗಿದೆ ಎಂಬ ಕಾರಣಕ್ಕೋಸ್ಕರವೇ ತಕ್ಷಣ ಕ್ರಮ ತೆಗೆದುಕೊಂಡು ಅದನ್ನು ಅನೂರ್ಜಿತಗೊಳಿಸುವುದಕ್ಕೆ ತಡೆಹಿಡಿಯಲಾಗಿದೆ. ಮಿಸ್ಟೇಕ್ ಆಗಿದೆ. ನೋಡುತ್ತಿದ್ದೇವೆ. ಸೆಟರೈಟ್ ಮಾಡುತ್ತಿದ್ದೇವೆ.

ಶ್ರೀ ಮಹಮದ್ ಮೊಯಿನುದ್ದೀನ್.—ಆ ಸರ್ಕ್ಯುಲರ್ ಮೂರು ತಿಂಗಳು ಚಾರಿಯಲ್ಲಿತ್ತು.

ಶ್ರೀ ಎ. ಲಕ್ಷ್ಮೀಸಾಗರ್.—ಅದಕ್ಕೆ ಮೊದಲೇ ಮುಂದಿನ ಕ್ರಮ ತೆಗೆದುಕೊಂಡಿದ್ದೇವೆ.